ಅಸಲು ದಾವೆ ನಂಬ್ರ: 362/2019
ಪಿಡಬ್ಲ್ಯೂ- 02

ದಿನಾಂಕ: **25-07-2024** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು

ಪಾಟೀ ಸವಾಲು: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ

ನಾನು ಹೊಸಂಗಡಿ ಎನ್ ಆರ್ ಬೈಲಿನಲ್ಲಿ ವಾಸವಿರುತ್ತೇನೆ. ನನಗೆ ಎರಡು ಎಕರೆ ಜಮೀನು ಇರುತ್ತದೆ. ನಾನು ವ್ಯಾಪಾರ ಮಾಡುತ್ತಿದ್ದೇನೆ. ನಾನು ಖರೀದಿ ಮಾಡಿದ ಜಾಗದಲ್ಲೇ ವಾಸ ಮಾಡುತ್ತಿದ್ದೇನೆ. ಕೃಷಿ ಎಂದರೆ ನನಗೆ ಏನು ಎಂದು ಗೊತ್ತಾಗುತ್ತದೆ. ಅಡಿಕೆ, ಗೇರು ಬೀಜ, ಭತ್ತ ಬೆಳೆಸುವುದು. ವಾಂಟೆ ಹುಳಿ, ಪುನಾರ್ಪುಳಿ ಬೆಳೆಸುತ್ತೇನೆ. ಇವೆಲ್ಲಾ ಕೃಷಿಯಲ್ಲಿ ಬರುತ್ತದೆ.

2. ಜ್ಯೋತಿ ಶೆಟ್ಟಿಯವರು ನನಗೆ ಆಪ್ತರು ಎಂದರೆ ಸಾಕ್ಷಿ ಪರಿಚಯಸ್ಥರು ಎನ್ನುತ್ತಾರೆ. ಅವರ ಕೃಷಿಯ ಬೆಳೆಯನ್ನೆಲ್ಲಾ ನಾನೇ ತೆಗೆದುಕೊಳ್ಳುತ್ತೇನೆ. ಈ ದಿನ ಬನ್ನಿ ಎಂದು ನನಗೆ ವಾದಿ ತಿಳಿಸಿರುವುದಿಲ್ಲ, ವಕೀಲರು ಹೇಳಿರುತ್ತಾರೆ. ನಾನು ಈ ದಿನ ನ್ಯಾಯಾಲಯಕ್ಕೆ ಏಕೆ ಬಂದಿರುತ್ತೇನೆ ಎಂದು ಗೊತ್ತಿರುತ್ತದೆ. ಯಾವ ಜಾಗದ ಬಗ್ಗೆ ಸಾಕ್ಷಿ ಹೇಳಲು ಬಂದಿರುತ್ತೇನೆ ಎಂದು ಗೊತ್ತಿರುತ್ತದೆ. ಸರ್ವೆ ನಂಬ್ರ-166/ಪಿ1 ರ ಬಗ್ಗೆ ಸಾಕ್ಷಿ ನುಡಿಯಲು ಬಂದಿರುತ್ತೇನೆ. ಸರ್ವೆ ನಂಬ್ರ 166/ಪಿ1 ರಲ್ಲಿ ಕೃಷಿ ಇರುತ್ತದೆ. ಪುನಾರ್ಪುಳಿ, ರಕ್ತ ಚಂದನ, ಗಂಧದ ಗಿಡ, ಲಿಂಬು, ಸಪೋಟ ಹಾಗೂ ಸೀತಾಫಲವೂ ಸಹ ಇದೆ. ಗಂಧದ ಮರಗಳು ಕಾಡಿನಲ್ಲಿ ಇರುವಂತಹ ಮರಗಳು ಎಂದರೆ ಸಾಕ್ಷಿ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಪುನಃ ಅವರದ್ದು ಗೇರು ಬೀಜ ಇರುತ್ತದೆ ಎಂದು ನುಡಿಯುತ್ತಾರೆ. ಮತ್ತೆ ಯಾವುದೇ ದೊಡ್ಡ ಮರಗಳು ಆ ಜಾಗದಲ್ಲಿ ಇರುವುದಿಲ್ಲ.

3. ನಾನು ಸಲ್ಲಿಸಿದ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿರುತ್ತದೆ. ನಾನು ಈ ಮೇಲೆ ಹೇಳಿದಂತಹ ಮರಗಳನ್ನು ಹೊರತುಪಡಿಸಿ ಬೇರೆ ಯಾವುದೇ ಮರಗಳು ಇರುವುದಿಲ್ಲ. ವಾದಿಯವರಿಗೆ ಸದರಿ ಜಾಗ ಡಿ ನೋಟಿಫಿಕೇಷನ್ ಆಗಿ ಬಂದಿರುತ್ತದೆ. ನಾನು ಆ ಕಾಗದ ಪತ್ರಗಳನ್ನು ನೋಡಿರುತ್ತೇನೆ. ಆ ಕಾಗದ ಪತ್ರಗಳನ್ನು ವಾದಿಯವರು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ನನಗೆ ಆ ಬಗ್ಗೆ ಗೊತ್ತಿರುತ್ತದೆ.

4. ಸರ್ವೆ ನಂಬ್ರ-166 ಎಷ್ಟು ಎಕರೆ ಜಾಗ ಇರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ, ಆದರೆ ತುಂಬಾ ಜನರ ಹೆಸರಿನಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ನಾನು ಸರ್ವೆ ನಂಬ್ರ-166 ರ ಆರ್.ಟಿ.ಸಿ.ಯನ್ನು ನೋಡಿರುತ್ತೇನೆ. ಸಾಕ್ಷಿಗೆ ಈಗ ಸರ್ವೆ ನಂಬ್ರ-166 ರ ಆರ್.ಟಿ.ಸಿ.ಯನ್ನು ತೋರಿಸಿ ಸಾಕ್ಷಿಗೆ ಓದಲು ಆಗುತ್ತದಾ ಎಂದು ಕೇಳಿದ್ದು, ಸಾಕ್ಷಿ ದಾಖಲೆ ನೋಡಿ ಮೀಸಲು ಅರಣ್ಯ ಇರುತ್ತದೆ, ಆದರೆ ಅಲ್ಲಿ ಮೀಸಲು ಅರಣ್ಯ ಇರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಸರ್ವೆ

ನಂಬ್ರದಲ್ಲಿ ಎಷ್ಟು ಹಿಸ್ಸಾ ಬರುತ್ತದೆ ಎಂದು ಹೇಳಲು ಬರುವುದಿಲ್ಲ. ವಾದಿಯರಿಗೆ ಸರ್ವೆ ನಂಬ್ರ 166/ಪಿ1 ರಲ್ಲಿ ಎರಡು ಎಕರೆ 85 ಸೆಂಟ್ಸ್ ಜಾಗ ಇರುತ್ತದೆ. ಈ ಜಾಗವನ್ನು ಹೊರತುಪಡಿಸಿ ಬೇರೆ ಯಾವ ಪಟ್ಟಾ ಜಾಗ ಇರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ.

5. ಸರ್ವೆ ನಂಬ್ರ-166/ಪಿ5 ರಲ್ಲಿ ಒಟ್ಟು 122.40 ಎಕರೆ ಜಾಗ ಅರಣ್ಯ ಇಲಾಖೆಯವರ ಸ್ವಾಧೀನದಲ್ಲಿ ಇರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಅರಣ್ಯ ರಕ್ಷಣೆ ಮಾಡುವ ಬಗ್ಗೆ ಅದರ ಸುತ್ತಲೂ ಕಲ್ಲಿನ ಗುಪ್ಪವನ್ನು ಹಾಕಿರುತ್ತಾರೆ ಎಂದರೆ ಸಾಕ್ಷಿ ಯಾವುದೇ ಗುಪ್ಪ ಇರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಪಿ.4 ರ 4 ನೇ ಫೋಟೋ ತೋರಿಸಿ ಅಲ್ಲಿ ಮರಗಳು ಇರುತ್ತವಾ ಎಂದರೆ ಸಾಕ್ಷಿ ಮರಗಳು ಇರುತ್ತವೆ ಎಂದು ನುಡಿಯುತ್ತಾರೆ. ನನಗೆ ಜಾಗದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ, ಖಾಲಿ ಜಾಗದ ಫೋಟೋವನ್ನು ನೋಡಿ ಮರ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯರು ನನ್ನ ಪರಿಚಯಸ್ಥರಿದ್ದು, ಅವರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸಲ್ಲಿಸಿದ ಮುಖ್ಯ ವಿಚಾರಣೆ ಪ್ರಮಾಣ ಪತ್ರದ ಸಂಗತಿಗಳ ಬಗ್ಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ.

6. ಸರ್ವೆ ನಂಬ್ರ-166/ಪಿ1 ರಲ್ಲಿ ನಾನು ಹೇಳುವಂತಹ ಮರಗಳು ಇರುವುದಿಲ್ಲ ಎಂದರೆ ಸಾಕ್ಷಿ ನೀವು ಬಂದು ನೋಡಬಹುದು ಎಂದು ನುಡಿಯುತ್ತಾರೆ. ಸರ್ವೆ ನಂಬ್ರ-166/ಪಿ1 ಅರಣ್ಯ ಪ್ರದೇಶವಾಗಿದ್ದರೂ ಸಹ ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ವಾದಿಯರಿಗೆ ಆ ಜಾಗ ಮಂಜೂರಾಗಿರುವುದಿಲ್ಲ ಎಂದರೆ ಸರಿಯಲ್ಲ. ಅಕ್ರಮ ಸಕ್ರಮದಲ್ಲಿ ಮಂಜೂರಾಗಿರುತ್ತದೆ ಎಂದು ನುಡಿಯುತ್ತಾರೆ. ಅವರು ಆ ಜಾಗದ ಸ್ವಾಧೀನದಲ್ಲಿ ಇರುವುದಿಲ್ಲ ಹಾಗೂ ಬೆಳೆಯನ್ನು ಬೆಳೆದಿರುವುದಿಲ್ಲ ಎಂದರೆ ಸಾಕ್ಷಿ ಬೆಳೆಯನ್ನು ಬೆಳೆದಿರುತ್ತಾರೆ ಎಂದು ನುಡಿಯುತ್ತಾರೆ. ಅರಣ್ಯ ಜಾಗದಲ್ಲಿ ಅವರು ಸ್ವಾಧೀನದಲ್ಲಿ ಇರುತ್ತೇನೆ ಎಂದು ಸುಳ್ಳು ದಾವೆ ಸಲ್ಲಿಸಿದ್ದು, ನಾನು ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

ಓದಿ ಹೇ. ಕೇ. ಸರಿ ಇದೆ.

ನನ್ನ ಹೇ. ಮೇ. ಬೆ. ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾದೀಶರು
ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ